(ಸದನ ಪುನಃ ಸಂಜೆ 5.20 ಗಂಟೆಗೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು : ಪ್ರಶ್ನೋತ್ತರಕ್ಕೆ ಹೋಗುವ ಮುಂಚೆ ನಾನು ಸದನದಲ್ಲಿ ಒಂದು ನಿರ್ಣಯವನ್ನು ಕೊಡುತ್ತಿದ್ದೇನೆ.

5. <u>ಸಭಾಧ್ಯಕ್ಷರ ನಿರ್ಣಯ</u>

ವಿಷಯ : "ಶ್ರೀ ವೈ.ಸಂಪಂಗಿ, ವಿಧಾನಸಭಾ ಸದಸ್ಯರು, ಕೆ.ಜಿ.ಎಫ್, ವಿಧಾನ ಸಭಾ ಕ್ಷೇತ್ರ ಇವರ ವಿರುದ್ಧ ದಾಖಲಾದ ಲಂಚ ಪ್ರಕರಣದ ಕುರಿತು"

ಸದರಿ ಪ್ರಕರಣದ ಕುರಿತು ಇಂದು ಇಡೀ ರಾಜ್ಯದಲ್ಲಿ ಚರ್ಚೆ ನಡೆಯುತ್ತಿದೆ. ಒಬ್ಬ ಶಾಸಕರ ಮೇಲೆ ಲಂಚ ಹಣ ಸ್ವೀಕರಿಸಿದ ಸಂಬಂಧ ಲೋಕಾಯುಕ್ತರು ದಾಳಿ ಮಾಡಿ ಬಂಧಿಸಿ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿರುವ ಪ್ರಕರಣ ರಾಜ್ಯದ ಇತಿಹಾಸದಲ್ಲಿಯೇ ಪ್ರಪ್ರಥಮವಾದುದು ಅಂಥ ಹೇಳಬಹುದು.

ಕರ್ನಾಟಕ ಲೋಕಾಯುಕ್ತರು ಬೆಂಗಳೂರು ನಗರ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ನಂ.8/2009 ಕಲಂ 7, 13 (1) (ದಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ 1988ರ ಅನ್ವಯ ಪಿರ್ಯಾದುರರಾದ ಶ್ರೀ.ಹುಸೇನ್ ಮೊಹೀನ್ ಫಾರೂಖ್ ರವರ ಪಿರ್ಯಾದಿನ ಮೇಲೆ ಪ್ರಕರಣ ದಾಖಲು ಮಾಡಿಕೊಂಡು ದಿನಾಂಕ 29–1–2009ರಂದು ಲೋಕಾಯುಕ್ತ ಪೊಲೀಸರು ಆರೋಪಿತರಾದ ಶ್ರೀ.ವೈ.ಸಂಪಂಗಿ, ವಿಧಾನ ಸಭಾ ಸದಸ್ಯರು, ಕೆ.ಜಿ.ಎಫ್.ವಿಧಾನ ಸಣಾ ಕ್ಷೇತ್ರ ಇವರನ್ನು ಲಂಚ ಹಣ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಗೆ ನೇರವಾಗಿ ಸಿಕ್ಕಿ ಬಿದ್ದಿದ್ದು, ಆರೋಪಿತರನ್ನು ದಸ್ತಗಿರಿ ಮಾಡಲಾಗಿದೆ ಎಂದು ಲೋಕಾಯುಕ್ತ ಕಛೇರಿಯಿಂದ ನಮ್ಮ ಕಛೇರಿಗೆ ದಿನಾಂಕ 29–1–2009ರಂದು ಕಳುಹಿಸಿದ ಮಾಹಿತಿಯ ಮೇರೆಗೆ ತಿಳಿದು ಬಂದಿದೆ.

ಈ ಘಟನೆಯ ನಂತರ ಇಡೀ ಸಾರ್ವಜನಿಕ ವಲಯದಲ್ಲಿ ಮತ್ತು ಮಾಧ್ಯಮದಲ್ಲಿ ಸಾರ್ವಜನಿಕ ಜೀವನದಲ್ಲಿ ಇರತಕ್ಕ ವ್ಯಕ್ತಿಗಳ ಬಗ್ಗೆ ಅದರಲ್ಲೂ ಜನಪ್ರತಿನಿಧಿಗಳ ಬಗ್ಗೆ ಸಾಕಷ್ಟು ಚರ್ಚೆಗಳಾದವು. ಅಷ್ಟೇ ಅಲ್ಲ ಈಗ ನಡೆಯುತ್ತಿರುವ ಅಧಿವೇಶನ ಸಂದರ್ಭದಲ್ಲಿ ದಿನಾಂಕ 24–2–2009ರಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಗೌರವಾನ್ವಿತ ಸದಸ್ಯರು ಈ ವಿಷಯವನ್ನು

ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿ. ಈ ಕುರಿತು ಸರಿಯಾದ ನಿರ್ಣಯ ಕೈಗೊಳ್ಳಲು ಒತ್ತಾಯಿಸಿದ್ದಾರೆ. ಅಲ್ಲದೆ ಸಭಾಧ್ಯಕ್ಷನಾಗಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವ ಕ್ರಮ ಕೈಗೊಳ್ಳಬಹುದು ಎಂಬುದರ ಬಗ್ಗೆ ರಾಜಕೀಯ ಮುಖಂಡರ ಜೊತೆ ಚರ್ಚೆ ಮಾಡಿದ್ದೇನೆ. ಅದರಲ್ಲೂ ಪ್ರಮುಖವಾಗಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ.ಎಸ್.ಸುರೇಶ್ ಕುಮಾರ್ ಹಾಗೂ ಇನ್ನಿತರ ರಾಜಕೀಯ ಮುಖಂಡರಾದಂತಹ ಮಾಜಿ ಶಾಸಕರುಗಳಾದ ಶ್ರೀ ವಾಟಾಳ್ ನಾಗರಾಜ್, ಶ್ರೀ.ಜಿ.ವಿ.ಶ್ರೀರಾಮರೆಡ್ಡಿ ಮತ್ತು ಶ್ರೀ ರಾಜೇಂದ್ರನ್ ರವರೊಂದಿಗೆ ಸಮಾಲೋಚನೆ ನಡೆಸಿ ಅಡ್ವೊಕೇಟ್ ಜನರಲ್ ಮತ್ತು ಕಾನೂನು ಇಲಾಖೆಯವರ ಅಭಿಪ್ರಾಯವನ್ನೂ ಪಡೆದುಕೊಂಡಿರುತ್ತೇನೆ.

ಈ ಪ್ರಕರಣದ ಪ್ರಾರಂಭಿಕ ವಿಚಾರಣೆ ಮಾಡುವಂತಹ ಸಂದರ್ಭದಲ್ಲಿ ಮೊಟ್ಟಮೊದಲು ಉದ್ಭವಿಸಿದ ಪ್ರಶ್ನೆ – ಶಾಸಕರ ಭವನಕ್ಕೆ ಬಂದು ಒಬ್ಬ ಶಾಸಕರು ಲಂಚ ಸ್ವೀಕರಿಸುತ್ತಿದ್ದಾಗ ಅವರ ಮೇಲೆ ದಾಳಿ ಮಾಡುವಂತಹ ಮತ್ತು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವಂತಹ ಅಧಿಕಾರ ಲೋಕಾಯುಕ್ತರಿಗೆ ಇದೆಯೇ? ಎಂಬುದು. ಈ ಕುರಿತು ಕಾನೂನು ಇಲಾಖೆಯ ಮತ್ತು ಅಡ್ವೊಕೇಟ್ ಜನರಲ್ ರವರ ಅಭಿಪ್ರಾಯವನ್ನು ಕೇಳಿದಂತಹ ಸಂದರ್ಭದಲ್ಲಿ ಅವರು ನೀಡಿದಂತಹ ಅಭಿಪ್ರಾಯ ಕೆಳಗಿನಂತಿಗೆ:

"ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರಲ್ಲಿ "ಸಾರ್ವಜನಿಕ ನೌಕರರು" ಎಂದರೆ ಏನೆನ್ನುವುದನ್ನು ವ್ಯಾಖ್ಯಾನಿಸಿದೆ. ಕಲಂ 2 (12) ರಲ್ಲಿ ಹೇಳಿರುವಂತೆ ಸಾರ್ವಜನಿಕ ನೌಕರರು ಎಂದರೆ ಯಾವುದೇ ಕಾಲದಲ್ಲಿ.

ಎ) ಮುಖ್ಯಮಂತ್ರಿಯಾಗಿರುವ ಅಥವಾ ಮುಖ್ಯ ಮಂತ್ರಿಯಾಗಿದ್ದ;

ಬಿ) ಮಂತ್ರಿಯಾಗಿರುವ ಅಥವಾ ಮಂತ್ರಿಯಾಗಿದ್ದ;

ಸಿ) ರಾಜ್ಯ ವಿಧಾನ ಮಂಡಲದ ಸದಸ್ಯರಾಗಿರುವ ಅಥವಾ ಸದಸ್ಯನಾಗಿದ್ದ....

ಈ ವ್ಯಾಖ್ಯಾನದಲ್ಲಿ ವಿಧಾನ ಸಭೆಯ ಸದಸ್ಯರಾದವರು ಸಾರ್ವಜನಿಕ ನೌಕರರು ಎಂದು ಹೇಳಿರುವುದರಿಂದ ಶ್ರೀ ವೈ.ಸಂಪಂಗಿ ರವರು ವಿಧಾನ ಸಭೆಯ ಸದಸ್ಯರಾಗಿರುವುದರಿಂದ, ಅವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿಯಲ್ಲಿ ಬರುತ್ತಾರೆ".

ಮತ್ತು ವಿಧಾನ ಮಂಡಲದ ಸದಸ್ಯರನ್ನು ದಸ್ತಗಿರಿ ಮಾಡಲು ಅವಕಾಶ ಇದೆಯೆ ಎನ್ನುವ ಪ್ರಶ್ನೆಗೆ

"ವಿಧಾನ ಸಭಾ ಸದಸ್ಯರು ಲೋಕಾಯುಕ್ತ ಕಾಯ್ದೆಯಡಿ ಬರುವುದರಿಂದ, ತನಿಖೆ ಮಾಡಲು ಲೋಕಾಯುಕ್ತರಿಗೆ ಅಧಿಕಾರವಿದೆ. ತನಿಖೆ ಎಂದರೆ ದಸ್ತಗಿರಿ ಭಾಗವೂ ಸಹ ಸೇರುತ್ತದೆ. ಆದ್ದರಿಂದ, ವಿಧಾನ ಸಭೆಯ ಸದಸ್ಯರಾಗಿರುವುದರಿಂದ, ಅವರನ್ನು ದಸ್ತಗಿರಿ ಮಾಡದೇ ಇರಲು ಈ ಪ್ರಕರಣದಲ್ಲಿ ಯಾವ ವಿನಾಯ್ತಿ ಇರುವುದಿಲ್ಲ."

ಮಾನ್ಯ ವಿಧಾನ ಸಭಾ ಸದಸ್ಯರು ಇಂತಹ ಲಂಚ ಆರೋಪ ಪ್ರಕರಣದಲ್ಲಿ ಸಿಕ್ಕಿ ಹಾಕಿ ಕೊಂಡರೆ, ಅದು ಅವರಿಗೆ ಇದ್ದಂತಹ ಹಕ್ಕುಚ್ಯುತಿಗೆ ಭಂಗ ಉಂಟಾಗುತ್ತದೆಯೇ ಎಂದು ನೋಡಬೇಕಾಗುತ್ತದೆ. ಎಂ.ಎನ್.ಕೌಲ್ ಮತ್ತು ಎಸ್.ಎಲ್.ಶಖ್ದಾರ್‌ರವರ .Practice and Procedure of Parliament ಎಂಬ ಪುಸ್ತಕದ 15 ನೇ ಆವೃತ್ತದ ಪುಟ 286ರಲ್ಲಿ ಈ ರೀತಿ ಹೇಳಿರುತ್ತಾರೆ.

" It will, however, not constitute a breach of privilege or contempt of the House if the offer or payment of bribe is related to a business other than that of the House"

ಈ ಕಾರಣದಿಂದ ಸಹ ವಿಧಾನ ಸಭೆಯ ಸದಸ್ಯರ ಯಾವ ಹಕ್ಕುಚ್ಯುತಿ ಉಲ್ಲಂಘನೆ ಆಗಿರುವುದಿಲ್ಲ.

ಶ್ರೀ ಪಿ.ವಿ.ನರಸಿಂಹರಾವ್ ವಿರುದ್ಧ ರಾಜ್ಯ, A.I.R. 1998 ಪುಟ 2120 ರಲ್ಲಿ ಪ್ರಕಟವಾದಂತಹ ನಿರ್ಣಯಿತ ತೀರ್ಪಿನಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲವು ಕಂಡಿಕೆ 95ರಲ್ಲಿ ಈ ರೀತಿ ಹೇಳಿರುತ್ತಾರೆ.

"A Member of Parliament is a public servant under Section 2(c) of the Prevention of Corruption Act, 1998."

ಮುಂದುವರೆದ ಈ ತೀರ್ಪಿನಲ್ಲಿ ಈ ರೀತಿ ಹೇಳುತ್ತಾರೆ.

"A Member of Parliament does not enjoy immunity under Article 105 (2) or under Article 105 (3) of the Constitution from

being prosecuted before a criminal Court for an offence involving offer or acceptance of bribe for the purpose of speaking or by giving his vote in Parliament or in any committees thereof."

ಆದುದರಿಂದ, ವಿಧಾನ ಸಭೆಯ ಸದಸ್ಯರು ಲೋಕಾಯುಕ್ತ ಕಾಯ್ದೆ ಅಡಿ ಬರುವುದರಿಂದ ಆ ಕಾಯ್ದೆ ಅನ್ವಯವಾಗುತ್ತದೆ. ಹಾಗೂ ಲೋಕಾಯುಕ್ತ ಪೊಲೀಸಿನವರು ಸದಸ್ಯರನ್ನು ದಸ್ತಗಿರಿ ಮಾಡಲು ಅವಕಾಶ ಇರುತ್ತದೆ.

ಈ ರೀತಿಯಾಗಿ ಕಾನೂನು ಇಲಾಖೆ ಮತ್ತು ಅಡ್ವೊಕೇಟ್ ಜನರಲ್ ಇವರ ಅಭಿಪ್ರಾಯ ಇರುತ್ತದೆ.

ಆದರೆ ಈ ಹಿಂದೆ ಒಂದು ಪ್ರಕರಣದಲ್ಲಿ ಶ್ರೀ ಅನಿಲ್ ರಾಜಾರಾಂ ಕದಂ – ಪಿರ್ಯಾದುದಾರರು ವಿರುದ್ಧ ಶ್ರೀ ವಿ.ಎಸ್.ಕೌಜಲಗಿ, ವಿಧಾನ ಸಭಾ ಸದಸ್ಯರು ಇವರ ಪ್ರಕರಣದಲ್ಲಿ ಅವತ್ತಿನ ಕರ್ನಾಟಕ ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಶ್ರೀ ಎಂ.ಎನ್.ವೆಂಕಟಾಚಲ ರವರು ವಿಧಾನ ಮಂಡಲದ ಸದಸ್ಯರ ಮೇಲೆ ಕ್ರಮ ಕೈಗೊಳ್ಳಲು ಲೋಕಾಯುಕ್ತರಿಗೆ ಅಧಿಕಾರ ಇದೆ ಎನ್ನುವುದನ್ನು ಒಪ್ಪಿಕೊಂಡರೂ ಈ ಕೆಳಕಂಡಂತೆ ಅಭಿಪ್ರಾಯ ಪಟ್ಟಿರುತ್ತಾರೆ.

"Combined reading of the provision of sub-section (1) of Section 7 of the Act and the provision in the definition of 'action' in clause (1) of Section 2 of the Act, it becomes apparent that the Lokayukta is empowered to investigate any action, which is taken with the general or special approval of a Member of the State Legislature, only in case where the grievance or an allegation made against him, is in respect of an administrative action taken by him (Member of State Legislature) by way of decision or recommendation, etc., and not otherwise. In otherwords, if the grievance or an allegation made in a complaint, against a Member of the State Legislature does not relate to any administrative action taken by the said Member by way of decision, recommendation, etc, the question of Lokayukta investigating into such 'action' under the provision of sub-section (1) of section 7, could never arise."

ಎಂಬುದಾಗಿ ಅಭಿಪ್ರಾಯ ಪಟ್ಟು ಸದರಿ ಪ್ರಕರಣವು ತಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಹೇಳಿ ಪ್ರಕರಣವನ್ನು ಮುಕ್ತಾಯಗೊಳಿಸಿರುತ್ತಾರೆ.

ಹೀಗಾಗಿ ಇವತ್ತಿನ ಶ್ರೀ.ವೈ.ಸಂಪಂಗಿ ಯವರ ಪ್ರಕರಣ ಹಾಗೂ ಅವತ್ತಿನ ಲೋಕಾಯುಕ್ತರು ಶ್ರೀ ವಿ.ಎಸ್.ಕೌಜಲಗಿ ಯವರ ಪ್ರಕರಣದಲ್ಲಿ ಯಾವ ರೀತಿ ಅಭಿಪ್ರಾಯ ಪಟ್ಟಿದ್ದಾರೆ – ಪರಸ್ಪರ ಇವೆರೆಡರ ಬಗ್ಗೆ ಚಿಂತನೆ ಮಾಡುವಂತಾದ್ದು ಅವಶ್ಯಕತೆ ಇದೆ.

ಸದರಿ ಪ್ರಕರಣದಲ್ಲಿ ಪರಿಶೀಲಿಸಬೇಕಾದ ಮತ್ತೊಂದು ಅಂಶವೆಂದರೆ ಶಾಸಕರ ಭವನದಲ್ಲಿ ಶಾಸಕರನ್ನು ದಸ್ತಗಿರಿ ಮಾಡಬಹುದೇ ಎಂಬುದು. ಅದಕ್ಕೆ ಸಂಬಂಧಪಟ್ಟಂತೆ ಕಾನೂನು ಇಲಾಖೆ ಮತ್ತು ಅಡ್ವೋಕೇಟ್ ಜನರಲ್ ರವರು ಅಭಿಪ್ರಾಯ ವ್ಯಕ್ತಪಡಿಸಿದ್ದು ಈ ರೀತಿ ಇದೆ.

"ವಿಧಾನ ಸಭೆಯ ಸದಸ್ಯರು ವಿಧಾನ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದರೆ, ಅಥವಾ ವಿಧಾನ ಸಭೆಯ ಆವರಣದಲ್ಲಿ ಇದ್ದಲ್ಲಿ ಅಂತಹವರನ್ನು ವಿಧಾನ ಸಭೆಯ ಅಧ್ಯಕ್ಷರ ಅನುಮತಿ ಇಲ್ಲದೆ ದಸ್ತಗಿರಿ ಮಾಡಲು ಬರುವುದಿಲ್ಲ. ವಿಧಾನ ಸಭೆಯ ಆವರಣ ಬಿಟ್ಟು ಹೊರಭಾಗದಲ್ಲಿ ಸದಸ್ಯರು ಇದ್ದಲ್ಲಿ, ಅಂತಹ ಸಮಯದಲ್ಲಿ ದಸ್ತಗಿರಿ ಮಾಡಲು ಸಭಾಧ್ಯಕ್ಷರ ಅನುಮತಿ ಬೇಕಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಸದಸ್ಯರನ್ನು ದಸ್ತಗಿರಿ ಮಾಡಿದ ಕೂಡಲೇ ಈ ರೀತಿ ದಸ್ತಗಿರಿ ಮಾಡಿರುವುದಾಗಿ ದಸ್ತಗಿರಿ ಮಾಡಿರುವ ಬಗ್ಗೆ ಲೋಕಾಯುಕ್ತರು ಮಾನ್ಯ ಸಭಾಧ್ಯಕ್ಷರಿಗೆ ತಿಳಿಸಬೇಕಾಗುತ್ತದೆ."

ಹೀಗಾಗಿ ಸದರಿ ಪ್ರಕರಣದಲ್ಲಿ ಶಾಸಕರ ಭವನವು ಸಭಾಧ್ಯಕ್ಷರ ಅಧೀನದಲ್ಲಿ ಬರುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಿದಾಗ ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳ ನಿಯಮ 2 ರಲ್ಲಿ ಬರುವಂತಹ ಶಬ್ದಗಳ ಅರ್ಥವಿವರಣೆಯಲ್ಲಿ "ವಿಧಾನ ಸಭೆಯ ಆವರಣಗಳು" ಎಂದರೆ ಸಭಾಮಂದಿರ, . ಲಾಬಿ. ಗ್ಯಾಲರಿಗಳಯ ಮತ್ತು ಅಧ್ಯಕ್ಷರು ಆಗಿಂದಾಗ್ಗೆ ನಿರ್ದಿಷ್ಟಪಡಿಸಬಹುದಾದಂತಹ ಇತರ ಸ್ಥಳಗಳು" ಎಂದಿದೆ. ಹೀಗಾಗಿ ಈ ವ್ಯಾಖ್ಯಾನವನ್ನು ಅವಲೋಕಿಸಿದಾಗ ಶಾಸಕರ ಭವನ ವಿಧಾನ ಸಭೆಯ ಆವರಣಗಳು ಎಂಬುದರ ವ್ಯಾಖ್ಯಾನದ ವ್ಯಾಪ್ತಿಯ ಒಳಗೆ ಬರದೇ ಇರುವುದರಿಂದ ಶಾಸಕರ ಭವನದಲ್ಲಿ ಶಾಸಕರನ್ನು ದಸ್ತಗಿರಿ ಮಾಡಲು ಯಾವುದೇ ನಿರ್ಬಂಧಗಳಿರುವುದಿಲ್ಲ. ಈ ರೀತಿ ಶಾಸಕರನ್ನು ದಸ್ತಗಿರಿ ಮಾಡಲಿಕೆ ಪೂರ್ವಾನುಮತಿ ಇಲ್ಲದೆ

ಎ.ಸಿ. ವಿ.ಎಸ್-ಎಫ್ 17

ಇರುವಂಥಾದ್ದು ಮತ್ತು ಇದು ವಿಧಾನ ಸಭೆಯ ಆವರಣದ ಹೊರಗೆ ಈ ಪ್ರಕರಣ ನಡೆದಿರುವುದರಿಂದ ಸಭಾಧ್ಯಕ್ಷರು ತಕ್ಷಣವೇ ಶಾಸಕರ ಮೇಲೆ ಯಾವುದೇ ಕ್ರಮ ಕೈಗೊಳ್ಳಲು ಆಗಲಾರದು. ಇನ್ನು ವಿಧಾನ ಸಭೆಯಲ್ಲಿ ನಡೆದಂತಹ ಚರ್ಚೆಯಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರು ಶಾಸಕರ ಭವನ ಸಹ ವಿಧಾನ ಸಭಾಧ್ಯಕ್ಷರ ಅಧೀನದಲ್ಲಿ ಬರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ, ಅಲ್ಲದೆ ಆಡಳಿತದ ದೃಷ್ಟಿಯಿಂದ ಶಾಸಕರ ಭವನ ಸಭಾಧ್ಯಕ್ಷರ ಸುಪರ್ದಿಯಲ್ಲಿ ಬರುವುದರಿಂದ "ವಿಧಾನ ಸಭೆಯ ಆವರಣಗಳು" ವ್ಯಾಖ್ಯಾನದಲ್ಲಿ "ಶಾಸಕರ ಭವನ" ಎನ್ನುವ ಪದವನ್ನು ಸೇರಿಸುವುದು ಅವಶ್ಯವಿದೆ ಎಂದು ನನ್ನ ಅಭಿಪ್ರಾಯ. ಹೀಗಾಗಿ ಇನ್ನು ಮುಂದೆ "ವಿಧಾನ ಸಭೆಯ ಆವರಣಗಳು" ಎಂಬುದರ ವ್ಯಾಖ್ಯಾನದ ವ್ಯಾಪ್ತಿಯಲ್ಲಿ "ಶಾಸಕರ ಭವನ" ವೂ ಬರುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಘೋಷಿಸುತ್ತೇನೆ.

ಈ ರೀತಿಯಾಗಿ ಶಾಸಕರ ಭವನದಲ್ಲಿ ದಸ್ತಗಿರಿ ಮಾಡಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದ ಮೇಲೆ ಸಭಾಧ್ಯಕ್ಷರು ಮುಂದಿನ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ವಿಷಯಕ್ಕೆ ಸಂಬಂಧಪಟ್ಟಂತೆ ಕಾನೂನು ಇಲಾಖೆ ಈ ಕೆಳಕಂಡಂತೆ ಅಭಿಪ್ರಾಯ ಪಟ್ಟಿದೆ.

"ಸರ್ಕಾರಿ ನೌಕರರು ಇಂತಹ ಲಂಚ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡಲ್ಲಿ ಆರೋಪಣಾ ಪಟ್ಟಿಯನ್ನು ಸಲ್ಲಿಸುವ ಮುಂಚೆ ತನಿಖಾ ಅಧಿಕಾರಿಯವರು ಸಕ್ಷಮ ಅಧಿಕಾರಿಯಿಂದ ಕಲಂ 19ರ ಪ್ರಕಾರ ಅಭಿಯೋಜನೆ ಮಂಜೂರಾತಿ ಪಡೆಯಬಹುದೆ. ಆದರೆ ಈ ಒಂದು ಪ್ರಕರಣದಲ್ಲಿ ಅಭಿಯೋಜನೆ ಮಂಜೂರಾತಿ ಬೇಕಾಗುತ್ತದೆಯೇ ಎಂಬುದನ್ನು ನೋಡಬೇಕಾಗುತ್ತದೆ.

ಸಾಮಾನ್ಯವಾಗಿ ಸರ್ಕಾರಿ ನೌಕರರು ಇಂತಹ ಲಂಚ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡಲ್ಲಿ ಅಭಿಯೋಜನೆ ಮಂಜೂರಾತಿ ಕೊಡುವುದಕ್ಕೆ ಸಕ್ಷಮ ಪ್ರಾಧಿಕಾರ ಯಾರು ಎಂಬುದನ್ನು ಸಹ ಉಲ್ಲೇಖಿಸಿರುತ್ತಾರೆ. ನೇಮಕಾತಿ ಮಾಡಲು ಹಾಗೂ ಸೇವೆಯಿಂದ ವಜಾ ಮಾಡಲು ಯಾರಿಗೆ ಅಧಿಕಾರವಿರುತ್ತದೆಯೋ, ಅವರು ಆ ಅಭಿಯೋಜನೆ ಮಂಜೂರು ಮಾಡಬೇಕಾಗುತ್ತದೆ. ಆದರೆ ವಿಧಾನ ಸಭಾ ಸದಸ್ಯರನ್ನು ಸಭಾಧ್ಯಕ್ಷರು ನೇಮಕ ಮಾಡಿರುವುದಿಲ್ಲ. ಆ ರೀತಿ ನೇಮಕ ಮಾಡದೇ ಇರುವುದರಿಂದ, ಅವರನ್ನು ಅಧಿಕಾರ ಸ್ಥಾನದಿಂದ ತೆಗೆಯುವ ಅಧಿಕಾರವೂ ಸಹ ಇರುವುದಿಲ್ಲ. ಆದರೆ, ಅವರನ್ನು ಅನರ್ಹಗೊಳಿಸಲು ಅವಕಾಶವಿರುತ್ತದೆ. ಆದುದರಿಂದ ಲಂಚ ನಿವಾರಣಾ ಕಾಯ್ದೆ 19ರ ಪ್ರಕಾರ ಅಭಿಯೋಜನೆ ಮಂಜೂರಾತಿ ಸಹ ಮಾನ್ಯ ಸಭಾಧ್ಯಕ್ಷರು ಕೊಡಲು ಬರುವುದಿಲ್ಲ. ಇದರ ಬಗ್ಗೆ

ಮೇಲೆ ಹೇಳಿದಂತಹ A.I.R. 1998 S.C. 2120 ರಲ್ಲಿ ಪ್ರಕಟವಾಗಿರುವ ನಿರ್ಣಯಿತ ಪ್ರಕರಣದ ಕಂಡಿಕೆ 95 (3) ರಲ್ಲಿ ಈ ರೀತಿ ಹೇಳಿರುತ್ತಾರೆ:

"Since there is no authority competent to remove a Member of Parliament and to grant sanction for his prosecution under Section 19 (1) of the Prevention of Corruption Act, 1988, the Court can take congnizance of the offences mentioned in Section 19 (1) in the absence of sanction but till provision is made by Parliament in that regard by suitable amendment in the law, the prosecuting agency, before filing a chargesheet in respect of an offence punishable under Sections 7, 10, 11, 13 & 15 of the 1988 Act against a Member of Parliament in a criminal Court, shall obtain the permission of the Chairman of the Rajya Sabha/Speaker of the Lok Sabha, as the case may be."

ಅಂದರೆ ಮೇಲೆ ಹೇಳಿದಂತೆ ಈ ರೀತಿ ಅಭಿಯೋಜನೆ ಮಂಜೂರು ಮಾಡಲು ಅಧಿಕಾರ ಇಲ್ಲದಿರುವುದರಿಂದ, ಲಂಚ ನಿವಾರಣಾ ಕಾಯ್ದೆ ಕಲಂ 19 (1) ನ್ನು ತಿದ್ದುಪಡಿ ಮಾಡುವವರೆಗೂ ರಾಜ್ಯ ಸಭೆ ಹಾಗೂ ಲೋಕಸಭೆಯ ಸಭಾಧ್ಯಕ್ಷರಿಂದ ಅನುಮತಿ ಪಡೆಯಬೇಕೆಂದು ಹೇಳಿರುತ್ತಾರೆ.

ಗೌರವಾನ್ವಿತ ನ್ಯಾಯಾಧೀಶರು ಹೇಳಿದಂತೆ, ಮೇಲೆ ಹೇಳಿದಂತಹ ತತ್ವ, ಸಂಸತ್ತಿನ ಸದಸ್ಯರಿಗೆ ಅನ್ವಯವಾಗುವುದು, ಅದು ವಿಧಾನಸಭಾ ಸದಸ್ಯರಿಗೆ ಸಹ ಅನ್ವಯವಾಗುತ್ತದೆ. ಆದುದರಿಂದ ಅಭಿಯೋಜನೆ ಮಂಜೂರಾತಿಯನ್ನು ಸಭಾಧ್ಯಕ್ಷರಿಂದ ಪಡೆಯಲು ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೂ ಸಹ ಆರೋಪಣಾ ಪಟ್ಟಿಯನ್ನು ಸಲ್ಲಿಸುವ ಮೊದಲು ಸಭಾಧ್ಯಕ್ಷರ ಅನುಮತಿ ಪಡೆಯಬೇಕೆಂದು ಹೇಳಿರುವುದರಿಂದ, ಒಂದು ವೇಳೆ ತನಿಖಾಧಿಕಾರಿಯವರು ಈ ಅನುಮತಿ ಕೇಳಿದರೆ ಸಭಾಧ್ಯಕ್ಷರು ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಮತಿ ನೀಡಬಹುದಾಗಿರುತ್ತದೆ.

ಸಂವಿಧಾನ ಅನುಚ್ಛೇದ ಕಲಂ 191ರ ಪ್ರಕಾರ ಯಾವ ಸಂದರ್ಭದಲ್ಲಿ ವಿಧಾನ ಸಭೆಯ ಸದಸ್ಯರನ್ನು ಅನರ್ಹತೆ ಮಾಡಬಹುದೆಂದು ಹೇಳಿರುತ್ತಾರೆ. ಅದರಲ್ಲಿ, ಈ ರೀತಿ ಅಪರಾಧವನ್ನು ಎದುರಿಸುತ್ತಿರುವ ವಿಧಾನ ಸಭೆಯ ಸದಸ್ಯರನ್ನು ಅನರ್ಹಗೊಳಿಸಬೇಕೆಂದು ಹೇಳಿರುವುದಿಲ್ಲ.

ವಿಧಾನ ಸಭೆಯ ಸದಸ್ಯರು ವಿಧಾನ ಸಭೆಯಲ್ಲಿ ನಡೆದಂತಹ ಅಂಶಗಳ ಮೇಲೆ ಇರದೇ ಇರುವುದರಿಂದ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ವಿಧಾನ ಸಭೆಯ ಅಧ್ಯಕ್ಷರ ಪಾತ್ರ ಏನೂ ಇರುವುದಿಲ್ಲ. ಸದಸ್ಯರನ್ನು ಅನರ್ಹಗೊಳಿಸಲು ಸಹ ಬರುವುದಿಲ್ಲ. ಕಾರಣ ಈ ಹಂತದಲ್ಲಿ ಲಂಚ ಪ್ರಕರಣವನ್ನು ಮಾತ್ರ ನೋಂದಣಿ ಮಾಡಿಕೊಂಡಿರುತ್ತಾರೆ. ಆರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರೂ ಸಹ ಆರೋಪಣೆ ಮಾಡಿದಂತಾಗುತ್ತದೆಯೇ ಹೊರತು ರುಜುವಾತು ಮಾಡಿದಂತೆ ಆಗುವುದಿಲ್ಲ. ಆದುದರಿಂದ, ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಯಾವುದೇ ರೀತಿ ಕ್ರಮ ಕೈಗೊಳ್ಳಲು ಬರುವುದಿಲ್ಲ ಎನ್ನುವಂತಾದ್ದು ಕಾನೂನು ಇಲಾಖೆಯ ಅಭಿಪ್ರಾಯ.

ಆದರೆ ಇತ್ತೀಚೆಗೆ ನಡೆದಂತಹ ಹಲವಾರು ಪ್ರಕರಣಗಳಲ್ಲಿ ಅದರಲ್ಲೂ ಪ್ರಮುಖವಾಗಿ ಲೋಕಸಭಾ ಸದಸ್ಯರಾದ ಶ್ರೀ ಬಾಬುಬಾಯ್ ಕೆ.ಕಟಾರಿಯ ಅವರ ಪ್ರಕರಣದಲ್ಲಿ ಮತ್ತು ಕೆಲವು ಸಂಸತ್ ಸದಸ್ಯರು ಸಂಸತ್ತಿನಲ್ಲಿ ಪ್ರಶ್ನೆ ಕೇಳುವುದಕ್ಕೆ ಲಂಚ ಸ್ವೀಕಾರ ಮಾಡಿದ ಪ್ರಕರಣದಲ್ಲಿ ಸದಸ್ಯರ ದುರ್ನಡತೆ ಕುರಿತು ವಿಚಾರಣೆ ನಡೆಸಿ ವರದಿ ಸಲ್ಲಿಸುವ ಸಲುವಾಗಿ ಲೋಕಸಭೆಯಲ್ಲಿ ಮಾನ್ಯ ಸಂಸತ್ ಸದಸ್ಯರ ಸಮಿತಿಯೊಂದನ್ನು ರಚಿಸಲಾಗಿತ್ತು. ಆ ಸಮಿತಿಯು ನೀಡಿದ ವರದಿಯ ಆಧಾರದ ಮೇಲೆ, ಲೋಕಸಭೆಯು ಕೈಗೊಂಡ ನಿರ್ಣಯದ ಹಿನ್ನಲೆಯಲ್ಲಿ ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಲಂಚ ಸ್ವೀಕಾರ ಮಾಡಿದಂತಹ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರನ್ನು ಹಾಗೂ ಶ್ರೀ ಬಾಬುಬಾಯಿ ಕೆ.ಕಟಾರಿಯಾ ಅವರನ್ನು ಸದಸ್ಯತ್ವದಿಂದ ಅನರ್ಹಗೊಳಿಸಲಾಗಿರುತ್ತದೆ.

ಹೀಗಾಗಿ, ಇಂತಹ ಪ್ರಕರಣ ನಮ್ಮ ರಾಜ್ಯ ವಿಧಾನ ಮಂಡಲದ ಇತಿಹಾಸದಲ್ಲಿಯೇ ಮೊಟ್ಟಮೊದಲನೆಯದಾಗಿದ್ದು, ಈ ರೀತಿ ಒಬ್ಬ ಶಾಸಕರು ಲಂಚ ಸ್ವೀಕೃತಿ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡಿರುವುದು, ಇದರ ಸತ್ಯಾಸತ್ಯತೆ ಏನೇ ಇರಲಿ, ಇಡೀ ಒಂದು ಶಾಸಕರ ಸಮೂಹಕ್ಕೆ ಒಂದು ರೀತಿ ಅಗೌರವ ಜನಸಾಮಾನ್ಯರಲ್ಲಿ ಮೂಡಿದೆ ಮತ್ತು ಜನಪ್ರತಿನಿಧಿಗಳ ಬಗ್ಗೆ ಜನರಲ್ಲಿ ಇನ್ನೂ ಹೆಚ್ಚಿ ಅಸಡ್ಡೆ ಭಾವನೆ ಬೆಳೆಯುವಂತಾಗಿದೆ. ಇದೊಂದು ದುಃಖಕರವಾದಂತಹ ಪ್ರಕರಣ. ಇದು ಕೇವಲ ವೈ.ಸಂಪಂಗಿ ಯವರಿಗೆ ಮಾತ್ರ ಸಂಬಂಧಪಟ್ಟ ಪ್ರಕರಣವಲ್ಲ. ಇಡೀ ಜನಪ್ರತಿನಿಧಿಗಳು ಮತ್ತು ರಾಜಕೀಯ ಪಕ್ಷಗಳು ಭ್ರಷ್ಟಾಚಾರದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವಂತಹುದು. ಸದರಿ ಪ್ರಕರಣದಿಂದ ಇವತ್ತು ಇಡೀ ವ್ಯವಸ್ಥೆಗೆ ಕಳಂಕ ತರುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಸದಸ್ಯರ ದುರ್ನಡತೆ ಬಗ್ಗೆ ವಿಚಾರಣೆ ನಡೆಸುವುದು ಅವಶ್ಯವಿರುವುದರಿಂದ ಮತ್ತು ಇಲ್ಲಿ ವೈ.ಸಂಪಂಗಿ, ವಿಧಾನ ಸಭಾ ಸದಸ್ಯರು ಲೋಕಾಯುಕ್ತರ ಲಂಚ ಸ್ವೀಕೃತಿ ಪ್ರಕರಣದಲ್ಲಿ ಸಿಕ್ಕಿ ಬಿದ್ದಿರುವುದರಿಂದ ಅವರ ನಡವಳಿಕೆ ಸರಿಯಿದೆಯೋ ಅಥವಾ ದುರ್ನಡತೆಯೋ ಎನ್ನುವುದರ ಬಗ್ಗೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲುವಂತಹ ಅವಶ್ಯಕತೆ

ಇರುವುದರಿಂದ ಇದಕ್ಕೆ ಸಂಬಂಧಪಟ್ಟಂತೆ ವಿಚಾರಣೆ ನಡೆಸಲು, ಈ ಸದನದ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸುವ ಅವಶ್ಯಕತೆ ಇದೆ ಎನ್ನುವುದು ನನ್ನ ಅಭಿಪ್ರಾಯ. ಆದರೆ ಈ ಪ್ರಕರಣದಲ್ಲಿ ಶ್ರೀ.ವೈ.ಸಂಪಂಗಿ, ವಿಧಾನ ಸಭಾ ಸದಸ್ಯರು ಇವರ ಮೇಲೆ ಲೋಕಾಯುಕ್ತರು ಲಂಚ ನಿಯಂತ್ರಣಾ ಕಾಯ್ದೆ 1988ರನ್ವಯ ಈಗಾಗಲೇ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿಕೊಂಡು ಚಾರ್ಜ್‌ಶೀಟ್ ಸಲ್ಲಿಸುವ ಹಂತದಲ್ಲಿದೆ. ಈ ಸನ್ನಿವೇಶದಲ್ಲಿ ಉದ್ಭವವಾಗುವಂತಹ ಒಂದು ಪ್ರಶ್ನೆ ಎಂದರೆ ಕ್ರಿಮಿನಲ್ ಕೋರ್ಟಿನಲ್ಲಿ ಮೊಕದ್ದಮೆ ಇರುವಂಥ ಸಂದರ್ಭದಲ್ಲಿ, ಈ ಸದನದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ, ಸಮಿತಿಯ ಮುಖಾಂತರ ವಿಚಾರಣೆ ಮಾಡುವುದರಿಂದ ಲೋಕಾಯುಕ್ತರ ವಿಚಾರಣೆಗೆ ಏನಾದರೂ ಅಡತಡೆ ಬರಲಿದೆಯೇ ಎನ್ನುವಂಥಾದ್ದು. ಇದನ್ನು ವಿಚಾರಣೆ ಮಾಡಿ ನೋಡಿದಾಗ ಆ ರೀತಿಯ ಪರಿಸ್ಥಿತಿ ಉದ್ಭವವಾಗುವುದಿಲ್ಲ ಎಂದೆನಿಸುತ್ತದೆ. ಇಲ್ಲಿ ನಾವು ರಚನೆ ಮಾಡಿದಂತಹ ಸಮಿತಿಗೆ ಇಂತಹ ಪ್ರಕರಣಗಳಲ್ಲಿ ಶಾಸನಸಭೆಯ ಸದಸ್ಯರ ದುರ್ನಡತೆ ಬಗ್ಗೆ ವಿಚಾರಣೆ ಮಾಡುವಂತಹ ಅಧಿಕಾರ ವ್ಯಾಪ್ತಿಯನ್ನು ಆ ಸಮಿತಿಗೆ ಕೊಡುವುದರಿಂದ, ಮತ್ತೊಂದೆಡೆ ಲೋಕಾಯುಕ್ತರು ತಾವು ದಾಖಲು ಮಾಡಿಕೊಂಡಿರುವ ಲಂಚ ಸ್ವೀಕಾರದ ಬಗೆಗಿನ ಆಪಾದನೆಗಳ ಮೇಲೆ ವಿಚಾರಣೆ ನಡೆಸುವುದರಿಂದ, ಲೋಕಾಯುಕ್ತರ ವಿಚಾರಣೆಗೂ ಮತ್ತು ಸದನದ ಸಮಿತಿಯ ವಿಚಾರಣೆಗೂ ಯಾವುದೇ ಅಡತಡೆ/ಘರ್ಷಣೆ/ಸಬ್ ಜುಡಿಸ್ ಆಗುವುದಿಲ್ಲ.

ಈ ಹಿನ್ನಲೆಯಲ್ಲಿ ಈ ಒಂದು ಪ್ರಕರಣದ ತೀವ್ರತೆಯನ್ನು ಗಮನದಲ್ಲಿಟ್ಟುಕೊಂಡು ಶ್ರೀ.ವೈ.ಸಂಪಂಗಿ, ವಿಧಾನ ಸಭಾ ಸದಸ್ಯರು ಇವರ ದುರ್ನಡತೆಯ ಬಗ್ಗೆ ವಿಚಾರಣೆ ನಡೆಸಿ ಕೂಲಂಕುಷವಾದ ವರದಿಯನ್ನು ಸಲ್ಲಿಸುವ ಸಲುವಾಗಿ ಮಾನ್ಯ ಉಪ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಒಂದು "ವಿಶೇಷ ಸದನ ಸಮಿತಿ" ಯನ್ನು ರಚನೆ ಮಾಡಿರುತ್ತೇನೆ.

1. ಮಾನ್ಯ ಉಪ ಸಭಾಧ್ಯಕ್ಷರು	–	ಅಧ್ಯಕ್ಷರು
2. ಶ್ರೀ ಯೋಗೀಶ್ ಭಟ್	–	ಸದಸ್ಯರು
3. ಶ್ರೀ ತಿಪ್ಪೇಸ್ವಾಮಿ	–	ಸದಸ್ಯರು
4. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್	–	ಸದಸ್ಯರು
5. ಶ್ರೀ ಎನ್.ವೈ.ಗೋಪಾಲಕೃಷ್ಣ	–	ಸದಸ್ಯರು
6. ಶ್ರೀ ಶ್ರೀನಿವಾಸ ಪ್ರಸಾದ್	–	ಸದಸ್ಯರು
7. ಶ್ರೀ ಹೆಚ್.ಕೆ.ಕುಮಾರಸ್ವಾಮಿ	–	ಸದಸ್ಯರು

ಮಾನ್ಯ ಉಪ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಈ ವಿಶೇಷ ಸದನ ಸಮಿತಿಯು ಸದರಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ 30 ದಿನಗಳೊಳಗೆ ತನ್ನ ವರದಿಯನ್ನು ಸಭಾಧ್ಯಕ್ಷರಿಗೆ ಸಲ್ಲಿಸತಕ್ಕದ್ದು. ಆ ವರದಿಯ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲು ನಾನು ನಿರ್ಧಾರ ಮಾಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಒಂದು ದೀರ್ಘವಾದ ತೀರ್ಪನ್ನು ಕೊಟ್ಟಿದ್ದೀರಿ. ಇದಕ್ಕೆ ನಾವು ಯಾರೂ ಕೂಡ ಪ್ರಶ್ನೆ ಮಾಡುವುದಿಲ್ಲ. ಆದರೆ, ಇದರಲ್ಲಿ terms of reference ಇಲ್ಲ. ಇದು ಏನಾಗಿದೆ ಎಂದರೆ, ಈ ರೀತಿಯಾಗಿ ಈ ಹಿಂದೆ ಕೆಲವು ಪ್ರಕರಣಗಳು ಮತ್ತು ಅದರ ಉದಾಹರಣೆಗಳನ್ನು ಹೇಳುತ್ತಾ, ಇದು ನಿಮ್ಮ ವ್ಯಾಪ್ತಿಗೆ ಬರುವುದಿಲ್ಲ, ನಿಮ್ಮ ವ್ಯಾಪ್ತಿಗೆ ಬರಬೇಕಾದರೆ ಈಗ ಪುನಃ ಹೊಸದಾಗಿ ಅದನ್ನು Legislators' home ಗೆ ಸೇರಿಸಿ, ಮುಂದೆ ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಒಂದು ಹಕ್ಕು ನಿಮಗೆ ಸಿಗುತ್ತದೆ ಎನ್ನುವ ವರದಿಯನ್ನು ಇದರಲ್ಲಿ ತಾವು ಮಾಡಿದ್ದೀರಿ. ಆದರೆ, ಮುಂದೆ ಇದನ್ನು ಯಾರೇ ಅಲ್ಲಿ ತೆಗೆದುಕೊಳ್ಳತಕ್ಕಂಥವರು, ನೇರವಾಗಿ ಈಗ ಲೋಕಾಯುಕ್ತದವರು ದಾಳಿ ಮಾಡತಕ್ಕಂಥಾದ್ದೇ ಆಗಲಿ, ಅಥವಾ ಪೊಲೀಸ್‌ನವರು Prevention of Corruption Act ಕೆಳಗೆ arrest ಮಾಡಬೇಕಾಗಿದ್ದರೆ ಅಥವಾ ಕೇಸ್ ಹಾಕಬೇಕಾಗಿದ್ದರೆ ಅಥವಾ ಚಾರ್ಜ್ ಶೀಟ್ ಹಾಕಬೇಕಾಗಿದ್ದರೆ ಅಥವಾ even FIR ಹಾಕಬೇಕಾಗಿದ್ದರೆ ತಮ್ಮ Permission ಅನ್ನು ಪಡೆದುಕೊಂಡು ಮುಂದೆ ಹೋಗಬೇಕು ಎನ್ನುವ ಅರ್ಥ ಇಲ್ಲಿ ಬರುತ್ತದೆ. ಆದರೆ, ಈ ಏಳು ಜನರ ಸಮಿತಿಯನ್ನು ತಾವು ಏನು ಮಾಡಿದ್ದೀರಿ, ಇವರಿಗೆ terms of reference ಮಾಡತಕ್ಕಂಥಾದ್ದು ಬಹಳ ಮುಖ್ಯ ಆ terms of reference ಇರಲಿಲ್ಲವೆಂದರೆ ಅವರು ಏನು report ಕೊಡಬೇಕು? ಅದಕ್ಕೆ ಅದನ್ನು ತಾವು ಸ್ಪಷ್ಟೀಕರಣವನ್ನು ಮಾಡಿದರೆ, ಒಂದು, ಎರಡು, ಮೂರು, ಇದರ ಬಗ್ಗೆ ಅವರು ತನಿಖೆ ಮಾಡಿ report ಕೊಡಬೇಕು. ಆ report ಆಧಾರದ ಮೇಲೆ ನಾವು ಮುಂದಿನ ಕ್ರಮವನ್ನು ಜರುಗಿಸುತ್ತೇವೆ ಅನ್ನತಕ್ಕಂಥದ್ದು. In absence of terms of reference, ಅವರಿಗೂ ಕೂಡ ಕೆಲಸ ಮಾಡುವುದಕ್ಕಾಗುವುದಿಲ್ಲ. General report ಹೇಳಬಹುದು ಅಥವಾ ಬುದ್ಧಿವಾದ ಹೇಳಬಹುದು, ಇಂತಹವು ನಡೆಯಬಾರದು ಎಂದು ಹೇಳಿಕೊಂಡು ಅದು ಕೇಸ್ ಅಲ್ಲಿಗೇ close ಆಗಬಹುದು. ಇದಕ್ಕೆ ದಯವಿಟ್ಟು ತಾವು terms of reference ಅನ್ನು ಆ ಕಮಿಟಿಗೆ ಕೊಡಬೇಕು, ಕೊಟ್ಟರೆ ಒಂದು ಸವಿಸ್ತಾರವಾದಂಥ ಮಾಹಿತಿ ಜೊತೆಯಲ್ಲಿ investigation ಮಾಡುವುದಕ್ಕೂ ಕೂಡ ಅವರಿಗೆ ಹಕ್ಕು ಸಿಗುತ್ತದೆ. ಇಲ್ಲದಿದ್ದರೆ, ನಾಳೆ ಮತ್ತೆ ಇನ್ನೂ

ಯಾರಾದರೂ ಬಂದು ಇದು ನಿಮ್ಮ ಪರಿಧಿಗೆ ಬರುವುದಿಲ್ಲ, ಇದರಲ್ಲಿ ನಿಮ್ಮ terms of refernce ಇದೆ, ಇಲ್ಲದೇ ಇರತಕ್ಕಂಥ ಪ್ರಶ್ನೆ ನೀವು ಏಕೆ ಕೇಳುತ್ತೀರಿ? ಅಥವಾ ಇಲ್ಲದೇ ಇರತಕ್ಕಂಥ ಪ್ರಶ್ನೆಗಳಿಗೆ ನಾವು ಉತ್ತರ ಕೊಡುವುದಿಲ್ಲ ಅನ್ನತಕ್ಕಂಥ ಪ್ರಶ್ನೆಗಳು ಉದ್ಭವಿಸುತ್ತವೆ. ಅದಕ್ಕೆ ಸ್ಪಷ್ಟವಾದಂಥ ಕೆಲವು terms of reference ಅನ್ನು ತಾವು ಕೊಟ್ಟರೆ, ಏತಕ್ಕೋಸ್ಕರ ಲಂಚವನ್ನು ಪಡೆದರು? ಯಾವ ಕಾರಣಕ್ಕಾಗಿ ಪೊಲೀಸ್‌ನವರು arrest ಮಾಡಿದರು? ತನ್ನ ಪ್ರಭಾವವನ್ನು ಬೀರಿ ನಾನು ಕೆಲಸವನ್ನು ಮಾಡಿಸಿಕೊಡುತ್ತೇನೆ ಎನ್ನುವುದು ಅಥವಾ ಸರ್ಕಾರದ ಒಂದು ಪ್ರಭಾವ ಬೀರಿ ಕೇಸನ್ನು withdraw ಮಾಡಿಸುತ್ತೇನೆ ಎಂದು ಹೇಳುವುದು. ಇಂತಹವುಗಳಿಗೆ ಕೆಲವೊಂದು terms of referenceಗೆ ಹಾಕಿದರೆ ಅದಕ್ಕೆ ಉತ್ತರ ಸಿಗುತ್ತದೆ, ಇಲ್ಲದಿದ್ದರೆ ಉತ್ತರವೇ ಸಿಗುವುದಿಲ್ಲ, general report ಕೊಡುತ್ತಾರೆ. ಅದು ಅಲ್ಲಿಗೆ close ಆಗಿ ಹೋಗುತ್ತದೆ. ದಯವಿಟ್ಟು ಅದರ ಬಗ್ಗೆ ತಾವು ಹೇಳಬೇಕು.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಏನು ಕೆಲವೊಂದು ಪ್ರಶ್ನೆಗಳನ್ನು raise ಮಾಡಿದರು, ಅದು ಸರಿಯಿದೆ. ಈ ಹಿಂದೆ ಬೇರೆ ಬೇರೆ ಸದನ ಸಮಿತಿಗಳು ಇಲ್ಲಿ ರಚನೆಯಾದಂಥ ಸಂದರ್ಭದಲ್ಲಿ, ಜಂಟಿ ಸದನ ಸಮಿತಿ ರಚನೆಯಾದಂಥ ಸಂದರ್ಭದಲ್ಲಿ, ಈಗ ನಾನು ಇದಕ್ಕೆ ನನ್ನ ruling ಕೊಟ್ಟಿದ್ದೇನೆ. ಈಗ ತಾವು ಏನು ಸಲಹೆ ಕೊಟ್ಟಿದ್ದೀರಲ್ಲಾ, ಏನು specific ಆದಂಥ terms of reference ಇದೆಯಲ್ಲಾ, ಈ ನಿರ್ಣಯವನ್ನು ಕಮಿಟಿ constitute ಆಗುವಾಗ ಏನು bulletin ಹೊರಡಿಸುತ್ತೇನೆ, ಆಗ ಅದರ ಜೊತೆಗೆ terms of reference ಅನ್ನು ಸಹ ನಾನು ಕಳುಹಿಸಿಕೊಟ್ಟು, ಯಾವ ಒಂದು ವ್ಯಾಪ್ತಿಯಲ್ಲಿ ಇದರ ಬಗ್ಗೆ ನಿರ್ಣಯ ಕೊಡಬೇಕು ಎಂಬುದನ್ನು specific ಆಗಿ, ಈ ಚರ್ಚೆಯ ಹಿನ್ನೆಲೆಯಲ್ಲಿ, terms of reference ಅನ್ನು ಕೊಟ್ಟೇ ನಾನು ಕಳುಹಿಸುತ್ತೇನೆ. ಮುಂದೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಮೊದಲನೇ ಪ್ರಶ್ನೆ ಮಾನ್ಯ ಸಿ.ಟಿ.ರವಿಯವರದು. ಇದಕ್ಕೆ ಮಾನ್ಯ ಕೃಷಿ ಸಚಿವರು ಉತ್ತರ ಕೊಡುತ್ತಾರೆ.

6. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ರೈತರ ಸಬ್ಸಿಡಿ ಕೃಷಿ ಪರಿಕರಗಳ ಬೆಲೆ ಮಾರುಕಟ್ಟೆ ದರ ಹೆಚ್ಚಾಗಿರುವ ಬಗ್ಗೆ.

57(348) ಶ್ರೀ.ಸಿ.ಟಿ.ರವಿ (ಚಿಕ್ಕ ಮಗಳೂರು)

ಶ್ರೀ.ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು)